‘ಯಾಕಿಲ್ಲ ಸುತ್ತ ಕಾಡು ಕವುತ್ಗಂದಿತೆ. ಫಸಲು ಕಾಲ್ದಲ್ಲಿ ಗಿಣಿ ಹಿಂಡ್ ಹಿಂಡೇ ಇಳುದ್ರೆ ಏನ್ಮಾಡ್ತಿಯಾ’ ಗಂಡ ಮತ್ತೆ ಅನುಮಾನ ವ್ಯಕ್ತಪಡಿಸಿದ್ದ. ಅದಕ್ಕೆ ಸೊಸೆ, ಅದೇನು ಹಗಲು ಹೊತ್ತಲಿ ಅಲ್ವಾ... ಮಾವ ಹೆಂಗಿದ್ರೂ ಇಲ್ಲೇ ಇದ್ದು ನೋಡ್ಕಳ್ತಾರೆ ಎಂದಿದ್ದಳು.

‘ಅದೇನು ಧೈರ್ಯ ಮಾಡಿ ಮಾಡ್ರಾ ಮಾರಾಯ ಗಿಣಿ ಪಾರ ನಾನ್ ನೋಡ್ಕಳ್ತೀನಿ’ ಎಂದಿದ್ದ ಮಾಟಣ್ಣ.

ಪಾಳು ಬಿದ್ದ ಗದ್ದೆ ಅಲ್ವಾ.... ಮೆಣಸಿನ ಗಿಡಗಳು ಮಂಡಿ ಎತ್ತರಕ್ಕೂ ಮೀರಿ ಸೊಂಪಾಗಿ ಬೆಳೆದು ನಿಂತವು. ಮಾಟಣ್ಣ ಹಗಲೆಲ್ಲಾ ಅಲ್ಲೆ ತಿರುಗಾಡಿಕೊಂಡು ಗಿಡಗಳಿಗೆ ನೀರು ಹಾಯಿಸಿ ಸಂಜೆ ನಾಲ್ಕರ ವೇಳೆಗೆ ಸೇಂದಿ ಅಡಸಾಲೆಗೆ ಹೋಗಿ ಗೆಳೆಯರ ಗೋಷ್ಠಿಯಲ್ಲಿ ಪಾಲುಗೊಳ್ಳುತ್ತಿದ್ದ.

ಮೆಣಸಿನಕಾಯಿ ಬಲಿತದ್ದು ಅದು ಹೇಗೆ ಗೊತ್ತಾಯಿತೋ ಮರದ ಮೇಲೆ ಒಂದೊಂದೇ ಗಿಣಿ ಕುಳಿತು ಕೀ ಕೀ ಎಂದು ಇಣುಕತೊಡಗಿದವು. ಮರುದಿನ ಸಂಜೆ ನಾಲ್ಕು ಗಂಟೆಗೆ ಮಾಟಣ್ಣ ಸೇಂದಿ ಅಡಸಾಲೆಗೆ ಗೆಳೆಯರ ಬಳಿಗೆ ಹೋಗುವ ತರಾತುರಿಯಲಿದ್ದ. ಆಗ ಹಸಿರು ಮೋಡದೋಪಾದಿಯಲ್ಲಿ ತೇಲಿಕೊಂಡು ಬಂದ ಒಂದು ಗಿಳಿಯ ಹಿಂಡು ಪಕ್ಕದ ಸಿದ್ದೇಗೌಡನ ತೋಟದ ಅಡಿಕೆ ಮರಗಳ ಮೇಲೆ ಕುಳಿತುಕೊಂಡಿತು. ಸ್ವಲ್ಪ ಹೊತ್ತಿನಲ್ಲೆ ಮತ್ತೊಂದು ಹಿಂಡು ಹಾರಿ ಬಂದು ಪಟೇಲರ ಯಾಲಕ್ಕಿ ಹಡ್ಲಿನ ಹನಾಲುತಾರಿ ಮರದ ಮೇಲೆ ಕುಳಿತುಕೊಂಡಿತು.

ಸ್ವಲ್ಪ ಹೊತ್ತು ಕಾದ ಪಕ್ಷಿಗಳು ಒಂದೊಂದೇ ಆಗಿ ಮೆಣಸಿನ ಗಿಡಗಳ ಮೇಲೆ ಇಳಿಯತೊಡಗಿದವು.

‘ಹೀಗೇ ಬಿಟ್ಟು ಹೋದರೆ ಇವು ಒಂದೇ ದಿವಸದಲ್ಲಿ ಎಲ್ಲ ಲೂಟಿ ಮಾಡಿ ಬಿಡುತ್ತವೆ’ ಎಂದು ಕೊಂಡು ಮಾಟಣ್ಣ ಮೆಣಸಿನ ತೋಟ ಸುತ್ತುಬಂದು ಗಿಣಿ ಓಡಿಸತೊಡಗಿದ. ಸಂಜೆಯಾಗಿದ್ದೇ ತಿಳಿಯಲಿಲ್ಲ. ಅಡಸಾಲೆಯ ಗೆಳೆಯರು ‘ಅದೇನು ಈವತ್ತು ಮಾಟಣ್ಣ ಬರಲಿಲ್ಲ’ ಎಂದು ಅಚ್ಚರಿಪಟ್ಟರು. ಮೆಣಸಿನ ತೋಟದಿಂದ ಕೇಳಿಬರುತ್ತಿದ್ದ ಕೂಗಾಟ ಕೇಳಿ ಬಾಲಪ್ಪ ಮಾಟಣ್ಣನ ಪಾಲಿನ ಎರಡು ಬಾಟ್ಲಿ ಸೇಂದಿ ಅಲ್ಲಿಗೇ ತಲುಪಿಸಿ ಹೋಗಿದ್ದ. ಮರುದಿನದಿಂದ ಮಾಟಣ್ಣನ ದಿನಚರಿಯೇ ಬದಲಾಗಿ ಹೋಗಿತ್ತು.

ಗಿಣಿಗಳ ಗದ್ದಲ ಬೆಳಗ್ಗೆ ಎಂಟಕ್ಕೆ ಶುರುವಾದರೆ ಹನ್ನೊಂದರವರೆಗೂ ನಡೆಯುತ್ತಿತ್ತೂ. ನಂತರ ಬಿಸಿಲು ಏರಿದಂತೆ ಕಾಡಿನ ಎತ್ತರದ ಮರಗಳಲ್ಲಿ ಅಡಗಿ ಕುಳಿತು ವಿಶ್ರಾಂತಿ ಪಡೆಯುತ್ತಿದ್ದವು. ನಂತರ ನಾಲ್ಕು ಗಂಟೆಗೆ ಸ್ವಲ್ಪ ತಂಪಾದರೆ ಸಾಕು ಅವುಗಳ ಆರ್ಭಟ ಶುರುವಾಗುತ್ತಿತ್ತು.

ಮಾಟಣ್ಣ ಮೆಣಸಿನ ತೋಟದ ನಡೂಮಧ್ಯಕ್ಕೆ ಒಂದು ದೊಡ್ಡ ಕಂಬ ನೆಟ್ಟು ಅದಕ್ಕೊಂದು ಬೆದರು ಬೊಂಬೆ ಕಟ್ಟಿದ. ಅದರಿಂದಲೂ ಏನೂ ಉಪಯೋಗ ವಾಗಲಿಲ್ಲ. ಪಕ್ಷಿಗಳು ಅದರ ಮೇಲೆಯೇ ಬಂದು



ಕೂತುಕೊಳ್ಳತೊಡಗಿದವು. ಬೆಳಗ್ಗೆ ಎಂಟರಿಂದ ಹನ್ನೊಂದರವರೆಗೂ ಗಿಣಿ ಓಡಿಸಿದ ಮಾಟಣ್ಣ, ನಂತರ ಹೋಗಿ ತನ್ನ ಪಾಲಿನ ಸೇಂದಿ ತರುತ್ತಿದ್ದ. ಒಂದೆರಡು ಚಿಪ್ಪು ಕುಡಿದು ಮಧ್ಯಾಹ್ನದ ಬುತ್ತಿ ಉಂಡು ಬೆದರು ಬೊಂಬೆಯ ಬುಡದಲ್ಲಿ ಹಾಗೆಯೇ ಉರುಳಿಕೊಂಡು ಆಯಾಸ ನೀಗಿಕೊಳ್ಳುತ್ತಿದ್ದ, ‘ಕುಳ್ಳಿ’ಯೂ ಅವನ ಬಳಿ ಮುಂಗಾಲು ನೀಡಿ ಕಣ್ಣು ಮುಚ್ಚುತ್ತಿತ್ತು. ಕಣ್ಣಾಲಿ ಕೂಡಿ ಬಂದಂತೆ ಮಾಟಣ್ಣ ಸಣ್ಣ ನಿದ್ದೆಗೆ ಜಾರುತ್ತಿದ್ದ. ಸಂಜೆ ನಾಲ್ಕಕ್ಕೆ ಗಿಣಿಗಳ ಗದ್ದಲ ಶುರುವಾದಂತೆ ಅವನಿಗೆ ಗಕ್ಕನೆ ಎಚ್ಚರವಾಗುತ್ತಿತ್ತು. ಅವನು ಎದ್ದು ಕುಳಿತಲ್ಲಿಂದಲೇ